# ವಸಂತದ ಸೊಗಸು

ಪ್ರಕೃತಿಯ ಬೇರೆ ಬೇರೆ ಅವಸ್ಥೆಗಳಲ್ಲಿ ವಸಂತವೂ ಒಂದು. ವಸಂತ ಮಾಸವನ್ನು ಪ್ರಕೃತಿಯ ಮರುಹುಟ್ಟು ಎಂದು ವ್ಯಾಖ್ಯಾನಿಸುತ್ತಾರೆ. ಸಮೃದ್ಧಿ, ಬದಲಾವಣೆ ಹಾಗೂ ಜೀವಂತಿಕೆಯ ಸಂಕೇತವಾಗಿರುವ ವಸಂತ ಋತು ಎಲ್ಲ ಋತುಗಳಿಗಿಂತ ಶಿಖರಪ್ರಾಯದಲ್ಲಿದೆ. ಪ್ರಕೃತಿ ನಮ್ಮ ಕಣ್ಣುಗಳಿಗೆ ಕವಿದಿರುವ ಅಹಂಕಾರದ ಪೊರೆಯನ್ನು ಶುದ್ಧಗೊಳಿಸಿ, ಜಗತ್ತು ಹೇಗಿದೆಯೋ ಹಾಗೆ ನೋಡಲು ಕಲಿಸುವ ಬೋಧೆ, ಸತ್ಯದ ಕಡೆ ನೋಡುವ ತಿಳಿವಿನ ಕಣ್ಣು.

ಮನುಷ್ಯನ ಯಾವ ಆಜ್ಞೆಯನ್ನೂ ಪಾಲಿಸದ ಪ್ರಕೃತಿಯು ಚಿಗುರೆಲೆಗಳ ಗಾಳಿಯನ್ನು, ಹೂವುಗಳ ಗಂಧವನ್ನು ಭೂಮಿಯ ಯಾವ ದಿಕ್ಕಿಗೆ ಬೇಕಾದರೂ ಕೊಂಡೊಯ್ಯುವ ಸ್ವಾತಂತ್ರ್ಯವನ್ನು ಪಡೆದಿದೆ. ಸಾರ್ವಕಾಲಿಕ ಹಾಗೂ ಸರ್ವವ್ಯಾಪಿ ಎನ್ನುವುದು ಭೂಮಿಯ ಮೇಲೆ ಏನಾದರೂ ಇದ್ದರೆ ಅದು ಪ್ರಕೃತಿಯೇ! ಶರತ್ಕಾಲ ಮತ್ತು ಹೇಮಂತದ ನಂತರ ಬರುವ ವಸಂತವು ಸ್ವಚ್ಛವೂ, ವೈವಿಧ್ಯತೆಯ ರೂಪದಲ್ಲಿ ತುಳುಕದೆ ಹರಿಯುವ ಆಳವಾದ ನದಿಯಂತೆ ಪ್ರಶಾಂತವಾಗಿರುತ್ತದೆ. ಇಂತಹ ಪ್ರಶಾಂತತೆಯಲ್ಲಿಯೇ ಮನಸ್ಸೂ ಸ್ವಚ್ಛವಾಗುತ್ತದೆ. ಪ್ರಕೃತಿಯು ಯಾವುದೇ ಮತಧರ್ಮವನ್ನಾಗಲಿ, ಸಂಪ್ರದಾಯವನ್ನಾಗಲಿ, ನಂಬಿಕೆಯನ್ನಾಗಲೀ ಕಲಿಸುವುದಿಲ್ಲ. ಋತುಗಳು ಚೆಲ್ಲುವ ಸುಗಂಧದ ಹೊಸ ಜೀವನೋತ್ಸಾಹವನ್ನು ನಮ್ಮೊಳಗೆ ತುಂಬುತ್ತದೆ. ವರ್ಷಾಕಾಲ ಆರಂಭವಾಗುವ ಹೊತ್ತಿಗೆ ವಸಂತ ಯಾವ ಅವಸರವೂ ಇಲ್ಲದೆ, ತನ್ನ ಒಡವೆಗಳಾಗಿದ್ದ ಬಗೆ ಬಗೆಯ ಹೂವುಗಳ ಪಕಳೆಗಳನ್ನು, ತಾನು ಮುಡಿದಿದ್ದ ನೂರಾರು ಮಾಗಿದ ಎಲೆಗಳನ್ನು ನಮಗೆ ಮುಫತ್ತಾಗಿ ಕೊಟ್ಟು ಭೂಮಿಯ ಮೇಲೆ ಮಳೆಯ ಬೀಜಗಳನ್ನು ಚೆಲ್ಲಿ ವಿದಾಯ ಹೇಳುತ್ತದೆ. ಮೋಡಗಳು ಈ ಮಳೆಯ ಬೀಜಗಳಿಂದ ಗರ್ಭಕಟ್ಟಿ 'ಆಕಾಶವು ಅರೆದು ಚೆಲ್ಲಿದ್ದ ಕಾಡಿಗೆಯ ಮುದ್ದೆಯಂತೆ' (ಋತು ಸಂಹಾರ) ಕಾಣುತ್ತಾ ಸೊಗಯಿಸುತ್ತವೆ.

ಈ ವಸಂತದ ರೂಪಕವು ಮುಂದೆ ಇನ್ನಷ್ಟು ಮಾಗಿ ಪ್ರೇಮದ ಉಪಮೆಯಾಗಿ ಸೂಫಿ ಕಾವ್ಯ ಪರಂಪರೆಯ ಅವಿಭಾಜ್ಯ ಅಂಗವೇ ಆಯಿತು. 'ವಸಂತಾಗಮನದ ಜೊತೆಗೆ ಬಂತು ನಲ್ಲನ ಸಂದೇಶ / ನಾವೀಗ ಪ್ರೇಮ ಸುರೋನ್ಮತ್ತರು, ನಿಲ್ಲಲಾಗದೆ ತೂರಾಡಿದವರು / ಹೋಗು ನಂದನವನಕ್ಕೆ ನನ್ನ ನಲ್ಲ, ಅಲ್ಲಿ / ಕಾದ ನಂದನದ ಸುಂದರಿಯರು, ನಿನ್ನ ನಿರೀಕ್ಷೆಯಲ್ಲಿ / ನಿನ್ನ ಹೆಜ್ಜೆ ಸದ್ದು ಕೇಳಿ ಹೂ ಹೂದಾನಿಗೆ ಬಂತು / ನಿನ್ನ ಭೇಟಿಗಾಗಿ ಹೂವಿನ ಮುಳ್ಳು ಕೆಂಪು ಕೆನ್ನೆಯ ಹಾಗೆ ಮೃದುವಾಯಿತು / ದೇವದಾರು ವೃಕ್ಷವೇ ಕೇಳು ನಿನ್ನ ನಿರೀಕ್ಷೆಯಲ್ಲಿ ಆ ಜಲಮಲ್ಲಿಗೆ ಹಾಡಿತು ಕೊರಳೆತ್ತಿ ನದೀ ದಡದಲ್ಲಿ' ಎಂದು ರೂಮಿ ಒಂದು ವಸಂತದ ನಡುಭಾಗದಲ್ಲಿ ಕನವರಿಸುತ್ತಾ ಹಾಡಿದ. ಎಲ್ಲರೂ ಗ್ರಹಿಸಬಹುದಾದ ಸರಳ ರೂಪಕ ಇದು.

'ಚೈತ್ರ ಚಿತ್ರೋತ್ಸವದ ಮುಂದೆ ನಿಂತಿದ್ದೇನೆ / ಹಳದಿ ಹೂಗಳ ರಾಶಿ ನನ್ನ ಮುಂದೆ...', 'ಬೆಟ್ಟವು ಹಬ್ಬಿದೆ, ಹೊಳೆ ಹರಿಯುತ್ತಿದೆ / ಮಲ್ಲಿಗೆ ಅರಳಿದೆ ಕಾಡಿನಲ್ಲಿ; / ಒಲುಮೆಯು ಬೆಚ್ಚಗೆ ಗೂಡಿನ ಒಳಗಿದೆ / ಹಾಡರಳುತ್ತಿದೆ ನಾಡಿನಲ್ಲಿ' ಎಂದು ಕೆಎಸ್‌ನ ಇದೇ ವಸಂತವನ್ನು ಮಾನವತೆ ಮತ್ತು ಸೃಜನಶೀಲತೆಯ ನಕ್ಷತ್ರದ ಬೆಳಕಿನಂತೆ ಒಲುಮೆಯ ಭಾಷೆಯಿಂದ ಕಡೆದರು. ಪ್ರಕೃತಿಯನ್ನು ನಾವು ಕಾವ್ಯ ಎಂದು ಕರೆಯಬಹುದಾದರೆ, ಅದು ಕಾಣಿಸುವುದೆಲ್ಲ ಸುಗುಣಧಾರೆಯ ದೃಶ್ಯ ಜಗತ್ತನ್ನು.

ಕಾಳಿದಾಸನು ಎಳೆಯ ವಯಸ್ಸಿನಲ್ಲಿ ಬರೆದ 'ಋತು ಸಂಹಾರ' ಋತುಗಳ ವರ್ಣನೆಗೆ ಪ್ರಖ್ಯಾತವಾದದ್ದು. 'ಋತು ಸಂಹಾರ' ಎಂದರೆ ಋತುಗಳ ಒಗ್ಗೂಡುವಿಕೆ ಅಥವಾ ಋತುಗಳ ಸಮೂಹವೆಂದು ಅರ್ಥ. ಕಾಳಿದಾಸನು 'ಋತು ಸಂಹಾರ'ವನ್ನು ಗ್ರೀಷ್ಮ ಋತುವಿನಿಂದ ಆರಂಭಿಸಿ ಋತುಗಳೆಲ್ಲ ಶಿಖರ ಪ್ರಾಯವಾದ ವಸಂತ ಋತುವಿನೊಂದಿಗೆ ಕೊನೆಗೊಳಿಸಿದ. 'ಋತು ಸಂಹಾರ'ದಲ್ಲಿ ಎಲ್ಲ ಋತುಗಳ ವರ್ಣನೆಯೂ ಇದೆ. ವಸಂತವು ಮನ್ಮಥನ ಗೆಣೆಕಾರನಂತೆ! ಆದ್ದರಿಂದಲೇ ಕಾಳಿದಾಸ ವಸಂತ ಋತುವನ್ನು ಪ್ರೇಮ ಮತ್ತು ಕಾಮೋದ್ಭವದ ಪ್ರತೀಕವಾಗಿ ಚಿತ್ರಿಸಿದ್ದಾನೆ. ಈ ಋತುವಿನಲ್ಲಿ ಅಶೋಕ, ಕರ್ಣಿಕಾರ, ನವಮಲ್ಲಿಕೆ, ಕುರುವಕ ಮುಂತಾದ ಕುಸುಮಗಳ ಬಗ್ಗೆ ನವುರಾದ ವರ್ಣನೆ ಇದೆ. ಈ ಎಲ್ಲವೂ ವಸಂತದ ಸೌಂದರ್ಯವನ್ನು ಹೆಚ್ಚಿಸಿವೆ. 'ಮುಗುಳ್ನಗೆಯ ಸುಂದರಿಯರು ಚಂದ್ರನನ್ನು ಆಭರಣವಾಗಿ ಧರಿಸಿದ್ದ ಸಂಜೆಗಳಂತೆ; ಹೊಸತಾಗಿ ಚಿಗುರಿದ ಗರಿಕೆಗಳ ಕತ್ತರಿಸಿದ ಪಚ್ಚೆಯ ಚೂರುಗಳಂತೆ' ಕಂಡವು ಎಂದು ಕಾಳಿದಾಸ ಮೋಹಕವಾಗಿ ಚಿತ್ರಿಸಿದ್ದಾನೆ.

ಕನ್ನಡದ ಪರಿಸರದಲ್ಲಿ ವಸಂತ ಮಾಸ ಬರುವುದರ ಕಣ್ಸನ್ನೆಯಾಗಿ ಮೊದಲು ಪ್ರಕೃತಿಯಲ್ಲಿ ಕಾಣಿಸಿಕೊಳ್ಳುವುದು 'ಮುತ್ತುಗ'. ಬೆಂಕಿಯ ಉಂಡೆಗಳಂತೆ ಧಗ ಧಗಿಸುವ ಮುತ್ತುಗದ ಹೂಗಳು ಈಗ ಕಾಡಿನಲ್ಲಿ ಭೂರಮೆಗೆ ಹೊದಿಕೆಯಾಗಿವೆ. ಪಾಪ ಮತ್ತು ಜೀವಹಿಂಸೆಯಿಂದ ಉಂಟಾಗುವ ಅನರ್ಥಗಳನ್ನು ಹಿಡಿದಿಡುವ ಕಾವ್ಯ 'ಯಶೋಧರ ಚರಿತೆ'. ಹಿಂಸೆ ಮತ್ತು ಬಲಿಯ ಪ್ರತಿಮೆಗಳಲ್ಲೇ ಚಿತ್ರಿಸಿರುವ ಜನ್ನನ 'ಯಶೋಧರ ಚರಿತೆ'ಯ ಬಲಿಯ ಸನ್ನಿವೇಶವೊಂದರಲ್ಲಿ ವಸಂತ ಋತುವನ್ನು '...ಮಾವಿನ ಅಡಿಮಂಚಿಕೆಯಲ್ಲಿ ಚೂರು ಚೂರಾಗಿ ಕತ್ತರಿಸಿದ ಮಾಂಸದ ಚೂರುಗಳಂತೆ ಶೋಭಿಸಿದವು ಆ ವನದಲ್ಲಿದ್ದ ಮುತ್ತುಗದ ಹೂಗಳು' ಎಂದು ಹಿಂಸ್ರಕ ಪ್ರತಿಮೆಗಳಲ್ಲಿ ಜನ್ನ ಚಿತ್ರಿಸಿದ್ದಾನೆ.

ಕಾಳಿದಾಸ, ಜನ್ನ, ರೂಮಿ ಮತ್ತು ಕೆಎಸ್‌ನ ಮುಂತಾದ ಕವಿಗಳು ಕಂಡ ವಸಂತ ಋತು ಕವಿ ನೆರೂಡನಲ್ಲಿ ಇನ್ನೊಂದು ರೂಪವನ್ನು ತಳೆದಿದೆ. 'ವಸಂತವೇ ಕ್ರಾಂತಿ' ಎಂದು ಹೇಳಿ ತನ್ನ ಕಾವ್ಯಕ್ಕೆ ಲೋಕಮಾನ್ಯತೆಯ ಕಿರೀಟ ತೊಡಿಸಿ, ಋತುಮಾನಗಳಿಗೆ ಸಾಮಾಜಿಕ ಬದಲಾವಣೆಯ ಉಡುಗೆಯನ್ನು ತೊಡಿಸಿದ. ಟಾಲ್‌ಸ್ಟಾಯ್ ಮಹರ್ಷಿ ಚಳಿಗಾಲದ ನಂತರ ವಸಂತ ಋತುವಿನ ಸೌಂದರ್ಯವನ್ನು ಆಸ್ವಾದಿಸುತ್ತಾ ಮಾಸ್ಕೋ ನಗರದಿಂದ 130 ಮೈಲಿಗಳಾಚೆ ಇರುವ ಯಾಸ್ನಾಯ ಪೋಲ್ಯಾನಕ್ಕೆ ನಡೆದುಕೊಂಡೇ ಹೋಗುತ್ತಿದ್ದನಂತೆ! ಹೀಗೆ ಸೃಜನಶೀಲತೆಯ ಅನಂತ ಸಾಧ್ಯತೆಗಳನ್ನು ಒಳಗೊಂಡಿರುವುದೇ ಋತುಮಾನಗಳ ವೈಶಿಷ್ಟ್ಯ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಬೌದ್ಧಿಕ ಸೌಂದರ್ಯವು ನಿಜಕ್ಕೂ ಎಲ್ಲ ಬಗೆಯ ಸೌಂದರ್ಯಗಳಿಗೂ ಮಿಗಿಲಾದುದು.
  —ಸಿ.ವಿ. ರಾಮನ್
- ಸೋತವನಿಗೆ ಮಾತ್ರ ಗೆಲುವಿನ ಅವಕಾಶವಿರುತ್ತದೆ.
  —ದ.ರಾ. ಬೇಂದ್ರೆ
- ಸ್ವರ್ಗವೆಂದರೆ ಮತ್ತೇನೂ ಅಲ್ಲ, ಯಾವಾಗಲೂ ಸಂತೋಷವಾಗಿ ಇರುವವರ ಮನಸ್ಸು.
  —ರಾಮಕೃಷ್ಣ ಪರಮಹಂಸ
- ನಾವೆಲ್ಲ ಒಂದೇ ಮನೆಯವರಣ್ಣ ತಮ್ಮದಿರು, ನಮ್ಮೆಲ್ಲರನು ಪಡೆದುದೊಂದೆ ನಾಡಿನ ಬಸಿರು, ಎಂದು ನಾವು ಅರಿದೆವೇ ನಮಗೆ ಇನ್ನಾರೆದುರು.
  —ಮಾಸ್ತಿ ವೆಂಕಟೇಶ ಅಯ್ಯಂಗಾರ್
- ನಾನು ನರಕದಲ್ಲಿಯೂ ಒಳ್ಳೆಯ ಪುಸ್ತಕಗಳನ್ನು ಸ್ವಾಗತಿಸುವೆ. ಅವು ಇದ್ದಲ್ಲಿ ಸ್ವರ್ಗ ತಂತಾನೆ ಹುಟ್ಟುತ್ತದೆ.
  —ರವೀಂದ್ರನಾಥ ಟ್ಯಾಗೋರ್
- ಜನ ನಡೆದಿದ್ದಾರೆ ಎಂದು ಸವೆದ ಹಾದಿಯಲ್ಲಿ ಹೋಗದಿರಿ, ನಿಮ್ಮದೇ ಹೊಸಹಾದಿಯನ್ನು ಸೃಷ್ಟಿಸಿಕೊಂಡು ಮುನ್ನಡೆಯಿರಿ.
  —ಗೌತಮ ಬುದ್ಧ
- ಶ್ರೇಷ್ಠ ಸತ್ಯವೆಂದರೆ ಪ್ರಾಮಾಣಿಕತೆ, ಅತಿದೊಡ್ಡ ಸುಳ್ಳೆಂದರೆ ಅಪ್ರಾಮಾಣಿಕತೆ.
  —ಖಲೀಫಾ ಅಬೂಬಕರ್
- ನಿಮ್ಮನ್ನು ನೀವು ಕಂಡುಕೊಳ್ಳುವ ಬಗೆ ಎಂದರೆ ಅದು ಮತ್ತೊಬ್ಬರಿಗೆ ಸೇವೆ ಮಾಡುವುದು.
  —ಮಹಾತ್ಮ ಗಾಂಧಿ
- ನಮ್ಮನ್ನು ಎಲ್ಲ ಮರೆವು. ಪಾಪಗಳಿಂದ ಮುಕ್ತಗೊಳಿಸುವುದೇ ವಿದ್ಯೆ.
  —ಚಂದ್ರಶೇಖರ ಕಂಬಾರ
- ತ್ಯಾಗವಿಲ್ಲದೆ, ಪರಿಶ್ರಮವಿಲ್ಲದೆ ಉಣ್ಣುವುದು ಕದ್ದ ಅನ್ನ ಉಣ್ಣುವುದಕ್ಕೆ ಸಮ.
  —ಭಗವದ್ಗೀತೆ